ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ09-12-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ

1. ಈ ದಾವೆಯನ್ನು ಓಣಿ ಅತಿಕ್ರಮಣ ಆಗಿರುವ ಬಗ್ಗೆ ಸಲ್ಲಿಸಿರುತ್ತೇನೆ. ಸದರಿ ಓಣಿ ಬಿಳಗಿ ಪೇಟೆಯಿಂದ ಕಿಲವಳ್ಳಿ, ಹೂವಿನಮನೆ, ತಾರಿಮನೆ ಹೋಗುತ್ತದೆ.

2. ದಾವಾ ಓಣಿಯ ಅಕ್ಕಪಕ್ಕದಲ್ಲಿ ಬಿಳಗಿ ಗ್ರಾಮದ ಸರ್ವೆ ನಂ 264 ನನಗೆ ಸೇರಿದ ಮಾಲ್ಕಿ ಜಮೀನಾಗಿರುತ್ತದೆ.

3. 2 ರಿಂದ 4 ನೇ ವಾದಿಯರ ಮನೆ ದಕ್ಷಿಣ ದಿಕ್ಕಿಗೆ ಮುಖ ಮಾಡಿರುತ್ತದೆ. 2 ರಿಂದ 4 ನೇ ವಾದಿಯರ ಮನೆಯ ಮುಂಬಾಗದಲ್ಲಿ ರಸ್ತೆ ಇರುತ್ತದೆ ಎಂದರೆ ಸರಿ. 2 ರಿಂದ 4 ನೇ ವಾದಿಯರ ಮನೆಗಳು ಕಾಮನ್ ಗೊಡೆಯಿಂದ ನಿರ್ಮಿಸಲಾಗಿರುತ್ತದೆ.

4. ನಮ್ಮ ಮನೆ ಪೂರ್ವದಿಕ್ಕಿಗೆ ಮುಖ ಮಾಡಿರುತ್ತದೆ. ನಾನು ಮಾಲ್ಕಿ ಜಾಗದಲ್ಲಿ ಮನೆ ಕಟ್ಟಿರುತ್ತೇನೆ. ನಾನು ಕಟ್ಟಿರುವ ಮನೆ ಈ ದಾವೆ ಸಲ್ಲಿಸಿರುವ ಪೂರ್ವದಲ್ಲಿ ಮಾಲ್ಕಿ ಜಮೀನಿನಲ್ಲಿ ಇತ್ತು ಎಂದು ನನಗೆ ಗೊತ್ತಿತ್ತು.

5. ನಮ್ಮ ಮನೆ ಬಿಳಗಿ ಗ್ರಾಮ ಸರ್ವೆ ನಂ 264 ರಲ್ಲಿ ಇರುತ್ತದೆ.

6. 4 ನೇ ವಾದಿಯ ಮನೆಯ ಪಶ್ಚಿಮ ಕ್ಕೆ ಹನುಮಂತ ದೇವರ ಗುಡಿ ಇರುತ್ತದೆ. 4 ನೇ ವಾದಿಯ ಮನೆ ಮತ್ತು ಸದರಿ ಹನುವಂತ ದೇವರ ಗುಡಿ ಮದ್ಯೆ 5-6 ಅಡಿ ಅಂತರ ಇರುತ್ತದೆ. ಸದರಿ 5-6 ಅಡಿ ಕ್ಷೇತ್ರದಲ್ಲಿ ಯಾವುದೇ ಕಟ್ಟಡಗಳು ಇರುವುದಿಲ್ಲ ಎಂದರೆ ಸರಿ.

7. ಈ ದಾವೆ ಜೊತೆಗೆ ಸಲ್ಲಿಸಿದ ಕಚ್ಚಾ ಹಾತ ನಕಾಶೆಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯಲ್ಲಿ ಸಲ್ಲಿಸಿರುವ ಕಚ್ಚಾ ಹಾತ್ ನಕಾಶೆಗೆ 2 ರಿಂದ 4 ನೇ ವಾದಿಗಳು ಯಾವುದೇ ಮಾಹಿತಿ ನೀಡಿರುವುದಿಲ್ಲ.

8. ಸದರಿ ಕಚ್ಚಾ ನಕಾಶೆಯಲ್ಲಿ 1 ನೇ ವಾದಿಯ ಮನೆ ಎಂದು ತೋರಿಸಿರುವ ಜಾಗದಲ್ಲಿ ಇರುವ ಮನೆ ನಮ್ಮ ಮನೆ ವಿಸ್ತೀರ್ಣ 28X30 ಅಡಿ ಇರುತ್ತದೆ. ಮತ್ತು ಸದರಿ ಅಂಗಳ 30X90 ಅಡಿ ಇರುತ್ತದೆ.

9. 2 ರಿಂದ 4 ನೇ ವಾದಿಗಳಿಗೆ ಪೂರ್ವ-ಪಶ್ಚಿಮವಾಗಿ ಯಾವುದೇ ಖಾಲಿ ಜಾಗ ಇರುವುದಿಲ್ಲ. ನನ್ನ ಮನೆಯ ಪಕ್ಕದಲ್ಲಿ 30X 90 ಖಾಲಿ ಜಾಗ ಇರುತ್ತದೆ. ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳ ಮಾಲ್ಕಿ ಜಾಗ ಬರುವುದಿಲ್ಲ.

10. ನನ್ನ ಮನೆಯ ಪಕ್ಕದಲ್ಲಿರುವ  ಅಂಗಳದಿಂದ 5 ಅಡಿ ದೂರದಲ್ಲಿ 1 ನೇ ಪ್ರತಿವಾದಿಯ ಮನೆ ಇರುತ್ತದೆ. 1 ನೇ ಪ್ರತಿವಾದಿಯ ಮನೆಯ ಕಾಂಪೌಂಡ್ ನಿಂದ ನನ್ನ ಮನೆಯ ಪಕ್ಕದಲ್ಲಿರುವ ಅಂಗಳದ ನಡುವೆ 5 ಅಡಿ ಖಾಲಿ ಜಾಗ ಇರುತ್ತದೆ.

11. ಬಿಳಗಿಯ ಪೇಟೇ ಬಿದಿಯಿಂದ ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳದಿಂದ 2 ರಿಂದ 4 ನೇ ವಾದಿಗಳು ಮತ್ತು ನಾನು ಸದರಿ ಅಂಗಳದ ಮೂಲಕ ಸರ್ವೆ ನಂ 265 ಮತ್ತು 264 ಕ್ಕೆ ಹೋಗಬಹುದು ಎಂದರೆ ಸರಿ.

12. ಬಿಳಗಿಯ ಪೇಟೇ ಬಿದಿಯಿಂದ ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳದಿಂದ 2 ರಿಂದ 4 ನೇ ವಾದಿಗಳು ಮತ್ತು ನಾನು ಸದರಿ ಅಂಗಳದ ಮೂಲಕ ಸರ್ವೆ ನಂ 265 ಮತ್ತು 264 ಕ್ಕೆ ನಾವು ಹಿಂದಿನಿಂದಲೂ ಹೋಗುತ್ತಿದ್ದೆವು ಎಂದರೆ ಸರಿಯಲ್ಲ.

13. ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳ ಗ್ರಾಮ ಠಾಣಾ ಜಮೀನಾಗಿದ್ದು ಸದರಿ ಗ್ರಾಮ ಠಾಣಾ ಜಮೀನಿನ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ.

14. ಸದರಿ ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳದಲ್ಲಿ 2 ರಿಂದ 4 ನೇ ವಾದಿಗಳಿಗೆ ಓಡಾಡಲು 30 ಅಡಿ ರಸ್ತೆ ಬಿಡಲು ನನ್ನ ತಕರಾರು ಇರುತ್ತದೆ. ನಮ್ಮ ಮನೆಯ ಹಿಂಬಾಗದಲ್ಲಿ ಕೊಟ್ಟಿಗೆ ಇರುತ್ತದೆ. ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳದಲ್ಲಿ ಯಾವುದೇ ಕೊಟ್ಟಿಗೆ ಇರುವುದಿಲ್ಲ.

15. ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳ ಇರುವ ಜಾಗದಲ್ಲಿ 1 ರಿಂದ 4 ನೇ ವಾದಿಗಳು ತಮ್ಮ ಮನೆಗೆ ಹೋಗಲು ಮತ್ತು ತಮ್ಮ ಜಮೀನಿಗೆ ಹೋಗಲು ಸದರಿ ಅಂಗಳದ ಮೂಲಕ ಓಡಾಡುತ್ತಿದ್ದು ದಾವಾದ  A B ಓಣಿಯಲ್ಲಿ ಯಾವತ್ತೂ ಓಡಾಡಿರುವುದಿಲ್ಲ ಎಂದರೆ ಸರಿಯಲ್ಲ.

16. 1 ನೇ ಪ್ರತಿವಾದಿಯ ಮನೆಯ ಪೂರ್ವಕ್ಕೆ ನಾಗಾರಾಜ ಬದ್ರಿ ನಾರಾಯಣ ಸರಾಫ ರವರ ಮನೆ ಇರುತ್ತದೆ. 1 ನೇ ಪ್ರತಿವಾದಿಯ ಮನೆಯ ಪೂರ್ವಕ್ಕೆ ನಾಗಾರಾಜ ಬದ್ರಿ ನಾರಾಯಣ ಸರಾಫ ರವರ ಮನೆಇದ್ದು ಸದರಿಯವರ ಮನೆ ಮತ್ತು 1 ನೆ ಪ್ರತಿವಾದಿ ಮನೆಯ ನಡುವೆ ಯಾವುದೇ ಖಾಲಿ ಜಾಗ ಇರುವುದಿಲ್ಲ.

17. 1 ನೇ ಪ್ರತಿವಾದಿಯ ಮನೆಯ ಉತ್ತರ ದಿಕ್ಕಿನಲ್ಲಿರುವ ಜಾಗ 1 ನೇ ಪ್ರತಿವಾದಿಗೆ ಸೇರಿರುತ್ತದೆ. 1 ನೇ ಪ್ರತಿವಾದಿಯ ಮನೆಯ ಉತ್ತರ ದಿಕ್ಕಿನಲ್ಲಿ ಅಂದಾಜು 30 ಅ ಡಿ ಅಗಲ 150 ಅಡಿ ಉದ್ದದ ಜಾಗ  1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿರುತ್ತದೆ.

18. ಕಚ್ಚಾ ನಕಾಶೆಯಲ್ಲಿ ಉತ್ತರ-ದಕ್ಷಿಣವಾಗಿ ಪಶ್ಚಿಮ ದಿಕ್ಕಿನ ಒಳಗೆ ನಮ್ಮ ಕುಟುಂಬದವರು ವಿಭಾಗ ಮಾಡಿಕೊಂಡು ವೈವಾಟಿ ಮಾಡಿಕೊಂಡು ಬರುತ್ತಿದ್ದೆವೆ ಎಂದರೆ ಸರಿಯಲ್ಲ.



19. ಪ್ರತಿವಾದಿಗಳು ದಾವಾ ಓಣಿ ಯನ್ನು ಬಂದ್ ಮಾಡಿರುತ್ತಾರೆ. ದಾವಾ ಓಣಿ ಪ್ರತಿವಾದಿಯವರಿಗೆ ಸೇರಿದ್ದರೂ ಸಹ ಸದರಿ ಓಣಿಯನ್ನು ಪಡೆಯುವ ಸಲುವಾಗಿ ಸುಳ್ಳು ಹಕ್ಕು ಸಾಧನೆ ಮಾಡುತ್ತಿದ್ದೆನೆ ಎಂದರೆ

ಸರಿಯಲ್ಲ. ನಾನು ನನ್ನ ದಾವೆಯಲ್ಲಿ ಹೇಳಿದಂತೆ AB ಓಣಿ ನನ್ನ ಉಪಯೋಗಕ್ಕಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ವಾದಿಗಳು ನಮ್ಮ ಮನೆಯ ಪಕ್ಕದಲ್ಲಿರುವ ಅಂಗಳ ಮೂಲಕ ಓಡಾಡುತ್ತಿರುವುದರಿಂದ 2 ರಿಂದ 4 ನೇ ವಾದಿಗಳು ನಾನು ಹೇಳಿದಂತೆ ಕೇಳುತ್ತಾರೆ ಎಂದರೆ ಸರಿಯಲ್ಲ.

20. ಈ ದಾವೆ ಸಲ್ಲಿಸುವ 10 ವರ್ಷದ ಹಿಂದೆಯೇ ದನಕರುಗಳನ್ನು ಸಾಕುವುದನ್ನು ನಿಲ್ಲಿಸಿರುತ್ತೇವೆ.

21. ನಾವು ಯಾವುದೇ ದನಕರುಗಳನ್ನು ಸಾಕದೆ ಇದ್ದರೂ ಸಹ ನಮ್ಮ ಮನೆಯಲ್ಲಿ ಕೊಟ್ಟಿಗೆ ಇಲ್ಲದೇ ಇದ್ದರೂ ಸಹ ದಾವೆಯಲ್ಲಿ ದಾವಾ AB ಓಣಿ ಗೆ ಸಂಬಂದಿಸಿದಂತೆ ಸುಳ್ಳು ಹಕ್ಕು ಸಾಧನೆ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ.

22. ಪ್ರತಿವಾದಿಯರು ದಾವಾ AB ಓಣಿ ಯನ್ನು 2016 ರಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆ. ಪ್ರತಿವಾದಿಯರು ದಾವಾ AB ಓಣಿ ಯನ್ನು 2016 ರಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿರುವ ಬಗ್ಗೆ ಗ್ರಾಮ ಪಂಚಾಯತ ಮತ್ತು ಕಂದಾಯ ಇಲಾಖೆಗೆ ಆ ಬಗ್ಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ AB ಓಣಿ ಯಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿ ಮನೆ ಕಟ್ಟಿರುವಾಗ ಪೊಟೊ ತೆಗೆಸಿರುತ್ತೇನೆ.

23. ನಿ.ಪಿ-39 ರಿಂದ 44 ಭಾವಚಿತ್ರಗಳನ್ನು 2016-2017 ರಲ್ಲಿ ನಾನೇ ನನ್ನ ಮೊಬೈಲ್ ಮೂಲಕ ತೆಗೆದಿರುತ್ತೇನೆ. 2016-2017 ರಲ್ಲಿ ಪ್ರತಿವಾದಿಗಳು ದಾವಾ AB ಓಣಿ ಯಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆ ಎಂದು ಹೇಳುವಾಗ ಆ ಬಗ್ಗೆ ಸಂಬಂದ ಪಟ್ಟ ಇಲಾಖೆ ಅಥವಾ ಪ್ರಾಧಿಕಾರದಿಂದ ಪರಿಹಾರ ಪಡೆಯಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

24. ನಿ.ಪಿ-32 ವಿಭಾಗಪತ್ರವನ್ನು ದಾವಾ AB ಓಣಿ ಇರುವುದನ್ನು ತೋರಿಸುವ ಸಲುವಾಗಿ ಹಾಜರುಪಡಿಸಿರುತ್ತೇನೆ. ನಿ.ಪಿ-32 ರ ಸರ್ವೆ ನಂ 264 ರಲ್ಲಿ 1 ನೇ ವಾದಿಗೆ ಬಂದ ಕ್ಷೇತ್ರದ ಪೂರ್ವಕ್ಕೆ ದಾವಾ AB ಓಣಿ ಇರುತ್ತದೆ. ಸರ್ವೆ ನಂ 264 ರ ಪೂರ್ವದಲ್ಲಿ ಲಗ್ತಆಗಿ ದಾವಾ AB ಓಣಿ ಬರುವುದಿಲ್ಲ. ಸರ್ವೆ ನಂ 264 ರ ಪೂರ್ವದಲ್ಲಿ ಗ್ರಾಮ ಠಾಣಾ ಜಾಗ ಬರುತ್ತದೆ. ಆ ನಂತರ ದಾವಾ ಓಣಿ ಬರುತ್ತದೆ.



25. ನಿ.ಪಿ-32 ರ ಪ್ರಕಾರ ಸರ್ವೆ ನಂ 264 ರ 1 ನೇ ವಾದಿಗೆ ಹೋದ ಕ್ಷೇತ್ರದ ಪೂರ್ವದಲ್ಲಿ ಓಣಿ ಎಂದು ಬರೆದಿದ್ದು ಅದು ತದ್ ಗಡಿ ಆಗಿರುವುದಿಲ್ಲ ಎಂದರೆ ಸರಿ. ನಿ.ಪಿ-32 ರ ಪ್ರಕಾರ 2 ರಿಂದ 4 ನೇ ವಾದಿಗಳಿಗೆ ಸದರಿ ಓಣಿಯ ಬಗ್ಗೆ ನಮೂದಿಸಿರುವುದಿಲ್ಲ.

26. ನಿ.ಪಿ-32 ರಲ್ಲಿ ನಾನು ಸಾಧನೆ ಮಾಡುತ್ತಿರುವ ದಾವಾ AB ಓಣಿಯ ಬಗ್ಗೆ ಪ್ರತ್ಯೇಕವಾಗಿ ನಮೂದಿಸಿರುವುದಿಲ್ಲ. ನಿ.ಪಿ-32 ರಲ್ಲಿ ನಾನು ಸಾಧನೆ ಮಾಡುತ್ತಿರುವ ದಾವಾ AB ಓಣಿಯ ಅಸ್ತಿತ್ವದ ಬಗ್ಗೆ ಮತ್ತು ಅದರ ಉದ್ದ ಅಗಲದ ಬಗ್ಗೆ ಪ್ರತ್ಯೇಕವಾಗಿ ನಮೂದಿಸಿರುವುದಿಲ್ಲ.

27. ನಾನು ಸಾಧನೆ ಮಾಡುತ್ತಿರುವ ದಾವಾ AB ಓಣಿಗೆ ಸಂಬಂದಿಸಿದಂತೆ ನಮ್ಮ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಬರವಣಿಗೆ ಆಗಿರುತ್ತದೆಯೋ ಇಲ್ಲವೊ ನನಗೆ ಗೊತ್ತಿಲ್ಲ.

28. ನಿ.ಪಿ–35 ಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ 2020 ರಲ್ಲಿ ದೂರನ್ನು ನೀಡಿರುತ್ತೇನೆ. ನಿ.ಪಿ–35 ರ ದಾಖಲೆಯನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ–35 ಕ್ಕೆ ಸಂಬಂದಿಸಿದಂತೆ ಲೋಕಾಯುಕ್ತ ಕಚೇರಿಯಿಂದ ಈ ಪ್ರಕರಣದ ಎಲ್ಲಾ ಪ್ರತಿವಾದಿಗಳಿಗೆ ನೋಟೀಸ ಜಾರಿ ಆಗಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

29. ನಿ.ಪಿ–35 ಕ್ಕೆ ಸಂಬಂದಿಸಿದಂತೆ ವರದಿ ನೀಡುವಾಗ ಯಾವುದೇ ಸರ್ವೆ ಮಾಡಿ ವರದಿ ನೀಡಿರುವುದಿಲ್ಲ.

30. ನಿ.ಪಿ–35 ಕ್ಕೆ ಸಂಬಂದಿಸಿದಂತೆ ಸದರಿ ದಾವಾದ AB ಓಣಿಗೆ ಸಂಬಂದಿಸಿದಂತೆ ಪೋಟೊ ತೆಗೆದಿರುತ್ತಾರೆ. ಸದರಿ ಪೋಟೊ ಈಗ ನಿ.ಪಿ–35 ರೊಂದಿಗೆ ಇರುವುದಿಲ್ಲ.

31. ದಾವಾದ AB ಓಣಿಗೆ ಅನುಕೂಲ ಆಗುತ್ತದೆ ಎಂದು ಸದರಿ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ.

33. ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ನಿ.ಪಿ–35 ರಿಂದ 38 ದಾಖಲೆಗಳನ್ನು ಮತ್ತು 39 ರಿಂದ 44 ರಪೊಟೊಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

34. ನಾನು ಪ್ರತಿವಾದಿಗಳ ವಿರುದ್ಧ OS No 38/2018, OS No 4/2020, ಮತ್ತು ಈ ಪ್ರಕರಣವನ್ನು ದಾಖಲಿಸಿರುತ್ತೇನೆ.

35. ನಿ.ಪಿ–39 ನ್ನು ಈ ಪ್ರಕರಣಕ್ಕೆ ಸಂಬಂದಿಸಿಂತೆ ಸುಳ್ಳು ಸಾಧನೆ ಮಾಡಲು ಸೃಷ್ಟಿಸಿದ ಸುಳ್ಳು ಭಾವಚಿತ್ರ ಆಗಿರುತ್ತದೆ ಎಂದರೆ ಸರಿಯಲ್ಲ.



36. ಈ ದಾವೆ ಸಲ್ಲಿಸಲು ನನಗೆ ಯಾವುದೇ ದಾವಾ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**